## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಹೆಚ್.ಬಿ.ಬಸಪ್ಪ, ನಿವೃತ್ತ ಕಾರ್ಯದರ್ಶಿ, ಹಳೇಕೋಟೆ ಗ್ರಾಮ ಪಂಚಾಯತಿ,- ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು – ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/201/ಗ್ರಾಪಂಕಾ/2011 ದಿನಾಂಕ:16–07–2011.
2. ಅಪರ ನಿಬಂಧಕರು ವಿಚಾರಣೆಗಳು–3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:LOK/INQ/14-A/147/2011/ARE-3 ದಿನಾಂಕ: 22-09-2017.
3. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ARE-3/Enq.147/2011 ದಿನಾಂಕ: 23-09-2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/758/ಗ್ರಾಪಂಕಾ/2017, ದಿನಾಂಕ: 08–11–2017.
5. ಶ್ರೀ ಹೆಚ್.ಬಿ.ಬಸಪ್ಪ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:28–11–2017.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಹೆಚ್.ಬಿ.ಬಸಪ್ಪ, ಕಾರ್ಯದರ್ಶಿ, ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(9)ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

"ಶ್ರೀ ಹೆಚ್.ಬಿ.ಬಸಪ್ಪ, ಕಾರ್ಯದರ್ಶಿ, ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರು ಶ್ರೀಮತಿ ರತ್ನಮ್ಮ ಕೋಂ ಪರಮೇಶ ಹಳೇಕೋಟೆ ಹೋಬಳಿ ಇವರಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಈ ಸಂಬಂಧ ಚೆಕ್ ವಿತರಣೆ ಮಾಡುವ ಸಂದರ್ಭದಲ್ಲಿ ಫಲಾನುಭವಿಗಳಿಂದ ರೂ.1000/–ಗಳ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೋಲೀಸರ ಟ್ರ್ಯಾಪ್ ಗೆ ಒಳಗಾಗಿ ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿನಡೆದುಕೊಂಡು ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಹೆಚ್.ಬಿ.ಬಸಪ್ಪ, ಕಾರ್ಯದರ್ಶಿ(ನಿವೃತ್ತ) ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರ

ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರು ಅಂಗೀಕರಿಸಿ ಶ್ರೀ ಹೆಚ್.ಬಿ.ಬಸಪ್ಪ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಹೆಚ್.ಬಿ.ಬಸಪ್ಪ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

ದಿನಾಂಕ:10-01-2008 ರಂದು ದೂರುದಾರರು ತಮ್ಮ ಸ್ವತ್ತನ್ನು ಸರ್ಕಾರದ ಹೆಸರಿಗೆ ಅಡಮಾನ ಮಾಡುವ ಸಲುವಾಗಿ ರೂ.1000/-ಗಳನ್ನು ಸಕಾರಕದ ಶುಲ್ಕ ನೀಡಿರುತ್ತಾರೆ ಹೊರತು ಅದು ಲಂಚ ಅಲ್ಲವೆಂದು ಹೇಳಿರುತ್ತಾರೆ. ಆದ ಕಾರಣ "ತಮ್ಮದೇನು ತಪ್ಪಿಲ್ಲವೆಂದು" ವಿವರಿಸುತ್ತಾ, "ತಮ್ಮ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಲು" ಕೋರಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಸಮರ್ಥವಾದ ಕಾರಣಗಳನ್ನು ಕೆಳಕಂಡಂತೆ ನೀಡಿರುತ್ತಾರೆ.

The complainant in his complaint and also in his evidence has categorically stated explaining the circumstances which forced him to file complaint against the DGO as per Ex-P1 and made specific allegation that, the DGO is demanding him Rs.1000/- by way of bribe in order to disburse last installment cheque payable to his wife being a beneficiary under Ashraya scheme and further the admitted fact that, the DGO received Rs. 1000/- from the complainant from his pant pocket are sufficient to hold that, the disciplinary authority has succeeded in establishing the charges against the DGO. Since I decline to believe the defence of the DGO on the ground that, the DGO has taken up such a defence contention only by way of an afterthought and got created Ex-D2 and d4 through DW-1, I am of the opinion that, the defence taken bythe DGO is unbelievable and deserves to be rejected.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತ ರವರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಹೆಚ್.ಬಿ.ಬಸಪ್ಪ, ಕಾರ್ಯದರ್ಶಿ(ನಿವೃತ್ತ) ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಶ್ರೀ ಹೆಚ್.ಬಿ.ಬಸಪ್ಪ,

ಕಾರ್ಯದರ್ಶಿ(ನಿವೃತ್ತ), ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಹೆಚ್.ಬಿ.ಬಸಪ್ಪ, ಕಾರ್ಯದರ್ಶಿ(ನಿವೃತ್ತ) ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/758/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:20-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಹೆಚ್.ಬಿ.ಬಸಪ್ಪ, ನಿವೃತ್ತ ಕಾರ್ಯದರ್ಶಿ ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಳೆನರಸೀಪುರ, ಹಾಸನ ಜಿಲ್ಲೆ.
7. ಶ್ರೀ ಹೆಚ್.ಬಿ.ಬಸಪ್ಪ, ನಿವೃತ್ತ ಕಾರ್ಯದರ್ಶಿ ಹಳೇಕೋಟೆ ಗ್ರಾಮ ಪಂಚಾಯತಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ .
8. ಗಣಕ ಕೋಶ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.